ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Friday, the 19th January 1979/Pushya 29, 1900 S.E.

The House met in the Assembly Chamber, Vidhana Soudha at One of the Clock.

[MR. SPEAKER (SRI P. VENKATARAMANA) in the Chair]

OBITUARY REFERENCES

re: Demise of Sriyuths K.P. Gadag, M. Doddanna Gowda, Kundur Rudrappa T. Nagappa, Vidhragara Hariyappa P. Basavana Gowda, A. Shankar Alva and G.T. Govinda Reddy.

ಅಧ್ಯಕ್ಷರು.—ಆರನೇ ವಿಧಾನ ಸಭೆಯ ಮೊದಲನೆಯ ಅಧಿವೇಶನ ಮುಂಕ್ತಾಯಗೊಂಡ ನಂತರ ನಿಧನರಾದ ಕೆಳಕಂಡ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚಿಸಲು ನಾನು ವಿಷಾದಿಸುತ್ತೇನೆ.

(೧) ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಕೆ.ಪಿ. ಗದಗ್ ಅವರು ದಿನಾಂಕ ೨೨-೯-೧೯೭೮ ರಂದು ನಿಧನರಾದರು.

(೨) ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ದೊಡ್ಡನಗೌಡ ಅವರು ದಿನಾಂಕ ೧೪-೧೧-೧೯೭೮ರಂದು ನಿಧನರಾದರು.

(೩) ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಕುಂದೂರು ರುದ್ರಪ್ಪ ಅವರು ದಿನಾಂಕ ೧೪-೧೧-೧೯೭೮ರಂದು ನಿಧನರಾದರು.

(೪) ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಟಿ. ನಾಗಪ್ಪ ಅವರು ದಿನಾಂಕ ೧೯-೧೧-೧೯೭೮ ರಂದು ನಿಧನರಾದರು.

(೫) ಹಿಂದಿನ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ವೈದ್ಯಗಾರ್ ಹರಿಯಪ್ಪ ಅವರು ೪-೧೨-೧೯೭೮ರಂದು ನಿಧನರಾದರು.

(೬) ಪ್ರಸಕ್ತ ವಿಧಾನ ಸಭೆಯ ಸದಸ್ಯರಾದ ಶ್ರೀ ಪಿ. ಬಸವನಗೌಡ ಅವರು ದಿನಾಂಕ ೩೧-೧೨-೧೯೭೮ರಂದು ನಿಧನರಾದರು.

(೭) ಮಾಜಿ ಸಹಕಾರ ಸಚಿವರಾದ ಶ್ರೀ ಎ. ಶಂಕರ ಆಳ್ವ ಅವರು ದಿನಾಂಕ ೩೧-೧೨-೧೯೭೮ ರಂದು ನಿಧನರಾದರು.

(೮) ಮಾಜಿ ವಿಧಾನಸಭೆಯ ಸದಸ್ಯರಾದ ಶ್ರೀ ಜಿ. ಟಿ. ಗೋವಿಂದ ರೆಡ್ಡಿ ಅವರು ದಿನಾಂಕ ೭-೧-೧೯೭೯ರಂದು ನಿಧನರಾದರು.

ಶ್ರೀಯುತರುಗಳಾದ ಕೆ.ಪಿ. ಗದಗ್, ಎಂ. ದೊಡ್ಡನಗೌಡ, ಕುಂದೂರು ರುದ್ರಪ್ಪ, ಟಿ. ನಾಗಪ್ಪ ವೈದ್ಯಗಾರ್ ಹರಿಯಪ್ಪ, ಪಿ. ಬಸವನಗೌಡ, ಎ. ಶಂಕರ ಆಳ್ವ ಹಾಗೂ ಜಿ. ಟಿ. ಗೋವಿಂದ ರೆಡ್ಡಿ ಅವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸುವಲ್ಲಿ ಮತ್ತು ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆಯ ಸಂತಾಪವನ್ನು ವ್ಯಕ್ತಪಡಿಸುವಲ್ಲಿ ತಾವೆಲ್ಲರೂ ನನ್ನೊಡನೆ ಭಾಗವಹಿಸುವಂತೆ ಕೋರುತ್ತೇನೆ.

ತಾವೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸುವ ಮೂಲಕ ದಿವಂಗತರಿಗೆ ಗೌರವವನ್ನು ಸೂಚಿಸಬೇಕೆಂದು ಕೋರುತ್ತೇನೆ.

The House stood in silence for a Minute

MR. SPEAKER.—Now Questions will be taken up

Seeking Consent of the Speaker for permission to make a Statement before Question Hour.

SRI B. BHASKAR NAIDU.—There are no Medicines.....

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳಿಹಿಸಿ ಕೊಟ್ಟಿದ್ದೆ.

ಅಧ್ಯಕ್ಷರು,—ಬಿಸಿನೆಸ್ ಆಡ್ವೈಸರಿ ಕಮಿಟಿ ಕುಳಿತು ನಿಯಮಾವಳಿ ಪ್ರಕಾರ ಏನು ನಿರ್ಧಾರ ಮಾಡಿದೆ ಆದರ ಪ್ರಕಾರ ಸಭೆ ನಡೆದುಕೊಳ್ಳಬೇಕು. ಆದ್ದರಿಂದ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ದಯವಾಡಿ ಕುಳಿತುಕೊಳ್ಳಬೇಕು,

ಶ್ರೀ ಎಸ್ ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಈಗ ಒಂದು ಅಸಾಮಾನ್ಯ ಪರಿಸ್ಥಿತಿಯಲ್ಲಿ ತಮ್ಮ ಅಪ್ಪಣೆ ಪಡೆಯುತ್ತಿದ್ದೇನೆ.

MR. SPEAKER.—Let us take up Questions according to programme.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ.....

MR. SPEAKER.—According to rule 32.

> "Unless the Speaker otherwise directs, the first hour of every day of Meeting shall be available for the asking and answering of questions." ಎಂದು ಇದೆ.

SRI S.R. BOMMAI.—I agree. ಸರ್ಕಾರ ಪ್ರಜಾಪ್ರಭುತ್ವಕ್ಕನುಗುಣವಾಗಿ, ಕಾನೂನು ಬದ್ಧವಾಗಿ ಆಡಳಿತ ನಡೆಸುವಾಗ, ಶಾಸನ ಸಭೆಯು ಕೂಡ ನಿಯಮಕ್ಕನುಗುಣವಾಗಿ ನಡೆಯುತಕ್ಕುದ್ದು ಸರಿ. ಈಗ ಅಸಾಮಾನ್ಯ ಪರಿಸ್ಥಿತಿಯಲ್ಲಿ ಅಪ್ಪಣೆ ಪಡೆಯುತ್ತಿದ್ದೇನೆ.

(Interruptions)

MR. SPEAKER.—This is Question Hour' we have to proceed according to rules.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಕೇಳುತ್ತಿದ್ದೇನೆ.

MR. SPEAKER.—I have not permitted you. Please resume your seat.

(Interruptions)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಹೇಳಿಕೆ ಕೊಡುವಂತಹ ಸಂದರ್ಭ ಉಂಟಾಗಿದೆ. ನಾವು ಈ ಕಡೆಯಿಂದ ಎಲ್ಲ ರೀತಿಯ ಸಹಕಾರ ಕೊಟ್ಟಿದ್ದೇವೆ. ನಿಯಮಕ್ಕೆ ಅನುಗುಣವಾಗಿ ನಡೆದುಕೊಂಡಿದ್ದೇವೆ.

ಅಧ್ಯಕ್ಷರು.—ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ.